Ex.**No.26/2016**
**D.W-2**

**ಸಾಕ್ಷಿಯನ್ನು ದಿನಾಂಕಃ 03.03.2026ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಡಿ ಎಸ್ ವಕೀಲರಿಂದ:**

ದಾವಾ ಆಸ್ತಿಯನ್ನು ಸಾಕ್ಷಿಗೆ ಸಂಪೂರ್ಣ ವಿವರದೊಂದಿಗೆ ಓದಿ ಹೇಳಲಾಗಿ, ಸಾಕ್ಷಿ ಸದರಿ ಆಸ್ತಿಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಾನು ಬುದ್ದಿ ಕಂಡಾಂಗಿನಿಂದ ನೋಡಿರುತ್ತೇನೆ. ಸದರಿ ಆಸ್ತಿಯಲ್ಲಿ ಎದುರುದಾರರು ಸ್ವಾಧೀನದಲ್ಲಿ ಇರುತ್ತಾರೆ. ಸದರಿ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ಆಸ್ತಿ ಎದುರುದಾರರಿಗೆ ಕ್ರಯಪತ್ರದಂತೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸದರಿ ವಿಚಾರವನ್ನು ನನಗೆ ಎದುರುದಾರರೇ ತಿಳಿಸಿದ್ದರು. ಈ ದಾವೇಯನ್ನು ಯಾರು ಸಲ್ಲಿಸಿದ್ದಾರೆ ಎನ್ನುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ.

2. ಸರ್ವೆ ನಂ.95ರಲ್ಲಿ 2-3 ಪೋಡು ಆಗಿರಬಹುದು. ಸರ್ವೆ ನಂ.95/8ರಲ್ಲಿ ಅರ್ಜಿದಾರರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.95/8 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅರ್ಜಿದಾರರೇ ಸ್ವಾಧೀನದಲ್ಲಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಸ್ವಾಧೀನಕ್ಕೆ ಎದುರುದಾರರು ತೊಂದರೆ ನೀಡಿದ ಕಾರಣ, ಈ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಎದುರುದಾರರು ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

Ex.**No.26/2016**
**D.W-2**

*<u>( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.